Regd No. M 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ

(ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು)
ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಸಂಪುಟ 19] ಮೈಸೂರು, ಬುಧವಾರ 15 ನೆ ಏಪ್ರಿಲ 1936 [ಸಂಚಿಕೆ 31

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಪಡಿಸಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ ಗೆ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೆಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳಪನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತಕ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರೀಕ್ಷಿಸಿ ನೋಡಬೇಕಾದ್ದು. ಟಿ ಗೆ 1 ಕ್ಕೆ 5 ಆಣೆ.

[ಸರಾ—ಕೆಲವು ಪುಡಿಗಳಲ್ಲಿ ಜತ್ತಿದಹೊಟ್ಟನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಮಿ| ಜಿ. ಎಸ್. ವೆಂಕಟರಾವ್

ಆಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August at 3½ per cent interest per Annum.

Remittances received at par at all Branches and Agencies.

The Quilon Bank

(Incorporated in Travancore, 1919)

Mysore Races & Sweep

— RACES —

30th May, 3rd, 6th, 9th, 11th & 13th June

Railway Specials run on all Race days between Bangalore and Mysore at special concession rates.

GOLD CUP SWEEP

(By permission of Government of Mysore)

TICKETS RS. 5 EACH

To close on Saturday 23 rd May 1936

Bonus given to sellers of winning Tickets.

Total Collection 1935—Rs. 19,970/-

For Prospectus and Particulars apply to

The Honorary Secretary
Race Course,
Mysore

ಜನರು ಏಕೆ ತಮ್ಮ ನಾವನ್ನು ತಾವೇ ಪ್ರಚಾರಮಾಡುತ್ತಾರೆ?

ಒಂದು ವೃತ್ತಪತ್ರಿಕೆ ಆಫೀಸಿನ ಆಶ್ಚರ್ಯಕರವಾದ ಅನುಭವ !

ಟೆಲಿಗ್ರಾಂ ಪ್ರಮಾದ—

ದಕ್ಷಿಣ ವೇಲ್ಸಿನ ಒಬ್ಬ ಮನುಷ್ಯನ ವಿಚಾರವಾಗಿ ಒಂದು ತಪ್ಪು ಒರಣಿಯ ಟೆಲಿಗ್ರಾಂ ಆತನ ನಂಟರಿಗೆ ಕೊಡಲಾಯಿತು. ಅದರಲ್ಲಿ " gone away " ಹೊರಟು ಹೋದ ಎಂಬುವುದಕ್ಕೆ ಬದಲು " passed away " ಸತ್ತುಹೋದ ಎಂದಿದ್ದಿತ. ಅದನ್ನು ನೋಡಿ ಅವನ ನಂಟರುಷ್ಟರು ಈತನು ಸತ್ತು ಹೋಗಿರುವುದಾಗಿ ನಂಬಿ. ಅವನ ಹೆಣವನ್ನು ಹೂಳಲು ಗೋರಿಯನ್ನು ಕೂಡ ಸಿದ್ಧಮಾಡಿದರು. ಆದರೆ ಇವನು ಸುಖವಾಗಿ ದೇಶವನ್ನು ಸೇರಿದನು. ಇದನ್ನು ಕಂಡು ಎಲ್ಲರೂ ಆಶ್ಚರ್ಯಗೊಂಡರು. ಈ ಸಂದರ್ಭದಲ್ಲಿ ತಪ್ಪು ಮಾಡಿದವರು ಟೆಲಿಗ್ರಾಂ ಕಳುಹಿಸಿದ ಬೇರೆ ಮನುಷ್ಯರು ಮತ್ತು ಅವರು ಯಾವ ದುರಾಲೋಚನೆಯೂ ಇಲ್ಲದೆ ಮಾಡಿದ ತಪ್ಪು

ಂ ಂ

ಮೋಸವನ್ನು ಶಿಕ್ಷಿಸಿಲು—

ಆದರೆ ಈ ವಿಚಿತ್ರ ಪ್ರಪಂಚದಲ್ಲಿ ವಿಚಿತ್ರ ಜನರನ್ನು ಕಾಣುತ್ತೇವೆ ಅವರು ತಮ್ಮ ಮರಣವನ್ನೇ ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆ. ಇದುಂದ ಎಷ್ಟೋ ಪ್ರಮಾದವಾಗುವುದು. ಕೆಲ ದಿವಸಗಳ ಹಿಂದೆ ಬೊಂಬಾಯಿ ವಿಶ್ವವಿದ್ಯಾಲಯದ ಪದವೀಧರನು ಪೂನಾ ಕೇಸರಿ ಪತ್ರಿಕೆಗೆ ತನ್ನ ಸುಳ್ಳು ಸಾವಿನ ವರ್ತಮಾನವನ್ನು ತಿಳುಹಿಸಲು ಏರ್ಪಡಿಸಿದನು. ಈತನಿಗೂ ಈತನ ಮೋಸನಿಗೂ ಜಗಳವಿತ್ತೆಂದು ವಿಚಾರಣೆಯಿಂದ ತಿಳಿಯಬಂದಿತು. ತನ್ನ ಅಳಿಯನು ಸತ್ತು ಹೋದನೆಂದೂ, ತನ್ನ ಮಗಳು ವಿಧವೆಯಾದಳೆಂದೂ ವ್ಯಸನಕರವಾದ ವರ್ತಮಾನವನ್ನು ಮೋಸನಿಗೆ ತಿಳಿಸಲು ಈ ಭಯಂಕರವಾದ ಮಾರ್ಗವನ್ನು ಈತನು ಹಿಡಿದನು.

ಂ ಂ

ತೊಂದರೆಯಿಂದ ತಪ್ಪಿಸಿಕೊಳ್ಳಲು—

ಮತ್ತೊಬ್ಬ ಯುವಕನು ಹಣಕಾಸಿನ ವಿಷಯದಲ್ಲಿ ಇತರ ತೊಂದರೆಗಳಿಗೆ ಸಿಕ್ಕಿದನು. ಆಗ ತಾನು ಸತ್ತು ಹೋದಂತೆ ಒಂದು ಕಾಗದವನ್ನು ಬರೆದು ಅದಕ್ಕೆ ತನ್ನ ಸ್ನೇಹಿತನ ರುಜುವನ್ನು ತಾನೇ ಹಾಕಿ ಕೇಸರಿ ಪತ್ರಿಕೆಗೆ ಕಳುಹಿಸಿದನು. ಇದು ಪ್ರಕಟವಾದ ಕೆಲವು ವಾರಗಳ ನಂತರ, ತನ್ನ ಸಾವಿನ ವಿಚಾರ ಪ್ರಕಟಿಸಿದ್ದಕ್ಕೆ ಮೊಖದ ಮೇಲೆ ಮಾಡುವುದಾಗಿ ಕೇಸರಿ ಆಫೀಸಿಗೆ ನೋಟೀಸು ಕೊಟ್ಟನು. ಆತನ ಕಾರ್ಡು ಇರುವುದೆಂದು ಕೋರ್ಟಿಗೆ ಹೋದರೆ ಈತನೇ ಬರೆದದ್ದೆಂದು ತೋರಿಸಲು ಬೇಕಾದಷ್ಟು ಸಾಕ್ಷ್ಯವಿರುವುದೆಂದು ನೋಟೀಸಿಗೆ ಉತ್ತರ ಕೊಡಲು, ಸುಮ್ಮನಾದನು.

ಂ ಂ

ಜೀವಂತನಾಗಿರುವನು ದೆವ್ವ ವೆಂದು ಭಯಪಟ್ಟದ್ದು

ಮೇಲ್ಲಂಡನನ ಮರಣವು ಕೇಸರಿ ಪತ್ರಿಕೆಯಲ್ಲಿ ಪ್ರಕಟವಾದನಂತರ ಈತನು ಶನ್ನ ಊರಿಗೆ ತಾಯಿಯನ್ನು ನೋಡಲು ಹೋದನು. ಪತ್ರಿಕೆಯಲ್ಲಿ ಪ್ರಕಟವಾಗಿದ್ದುದರಿಂದ, ತಾಯಿಯೂ ಈತನು ಸತ್ತಿರುವನೆಂದು ನಂಬಿದಳು ಈತನು ಹೋದೊಡನೆ ಹೆದರಿ ತನ್ನ ಮಗನ ದೆವ್ವವೆಂದು ಬಾಗಿಲುಹಾಕಿಕೊಂಡಳು ಮಗನು ತಾನು ಜೀವಂತನಾಗಿರುವುದಾಗಿ ಎಷ್ಟು ಜೇಳಿದರೂ ನಂಬದೆ. ಸ್ವಲ್ಪ ಹೊತ್ತುಸ್ಥಿರಮನಾಮ ಹೇಳಿದಳು. ದೆವ್ವಗಳು ರಾಮನಾಮವನ್ನು ಹೇಳುವುದಿಲ್ಲ. ಅನಂತರ ಮಗನು ಜೀವಂತನಿರುವುದನ್ನು ಒಪ್ಪಿಕ್ಕೊಂಡಳು.

ಬಿಜಾಪುರದಲ್ಲಿ ರಾಧಾಬಾಯಿ ಎಂಬ ದೇಶಸ್ಥ ಬ್ರಾಹ್ಮಣ ಕುಮಾರಿಯು ತನ್ನ ಗಂಡನಿಗೆ ಅಸಾಧ್ಯ ಅಸಾಧ್ಯ ಖಾಯಿಲೆಯಾಗಿದ್ದುದನ್ನು ಕಂಡು, ಆತನು ಬದುಕುವದು ದುರ್ಲಭವೆಂದು ತಿಳಿದು, ಭಾವಿಗೆ ಬಿದ್ದು ಪ್ರಾಣಬಿಟ್ಟಳೆಂದೂ, ಪತಿಯೂ ವಾರನೇ ದಿನ ತೀರಿ ಹೋದನೆಂದೂ, ಇವರಿಗೆ ಚಿಕ್ಕದೊಂದು ಮಗುವಿದೆ ಎಂದೂ ತಿಳಿಯಬಂದಿದೆ.

ಇದೇತಾ || ಲ್ಲಿ ಪ್ರಾರಂಭವಾದ ಜಮಖಂಡಿ ಸಂಸ್ಥಾನದ ಕಾಯದೆಮಂಡಳಿಯಲ್ಲಿ ಇಕ್ಕಂಟ್ಯಾಕ್ಸಿನ ಮಸೂದೆಯು ಪಾಸಾದದ್ದರಿಂದ ಕೆಲ ಸಭಾಸದರು ನಿಷೇಧಾರ್ಥವಾಗಿ ಸಭಾಗೃಹದಿಂದ ಎದ್ದು ಹೋದರು.

ರಾಣಿಸಿನ್ನೂರಲ್ಲಿ ಓರ್ವ ಹುಚ್ಚನು ಹೋಗುವ ಮೋಲುಗಾಡಿಯ ಮುಂದೆ ನಿಂತು ಅದನ್ನು ನಿಲ್ಲಿಸಿದನು. ಡ್ರೈವರು ಇಳಿದು ಬರಲು ಅವನು ತನ್ನ ಕಾಲುಗಳಿಗೆ ಒಗ್ಗಿ ಹೇಳಿದನು.

ಅಖಿಲ ಕೇರಳ ತಿಯ್ಯಾ ಯುವಕಸಂಘ ಕಾರ್ಯದರ್ಶಿ ಶ್ರೀ ಕೆ. ಸಿ. ಕಟ್ಟಿರವರು, ಇತರ ನಾಲ್ಕು ಮಂತ್ರಿಯೊಡನೆ ಅಲ್ಪೆಯಿಂದ ಅಮೃತಸರಕ್ಕೆ ಸಿಕ್ಖ್ ಮತಸ್ವೀಕರಣಕ್ಕಾಗಿ ತಾ|| ೧೦-೪-೩೬ ರಲ್ಲಿ ಹೊರಟಿರುವರು ತಿಯ್ಯಾ ಯುವಕರಿಗೆ ಸಂದೇಶವನ್ನು ಕಳುಹಿಸುತ್ತಾ ಇನ್ನು ಒಂದುಷ್ಟಣ ಕೂಡಾ ಹಿಂದೂ ಸವರ್ಣರ ನಿರಂಕುಶ ಪ್ರವರ್ತನೆಯನ್ನು ತಾವು ಸಹಿಸಲಾಗದೆಂದೂ, ಮೇ ತಿಂಗಳಲ್ಲಿ ಸಿಕ್ಖ್ ನಾಯಕರೊಂದಿಗೆ ಸ್ವದೇಶಕ್ಕೆ ಹಿಂತಿರುಗುವದಾಗಿಯೂ ತಿಳಿಸಿರುವರು.

ಪೆಷಾವರದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸರ್ಕಾರದವರು ಸ್ಥಾಪಿಸಲು ಏರ್ಪಾಟು ಮಾಡುತ್ತಿರುವರು.

ನಗುವ ರೋಗ !

ಹುಡುಗಿಯು ಒಂದೇ ಸಮನಾಗಿ ನಗುತ್ತಿದ್ದಾಳೆ !! — ವೈದ್ಯರು ಆಶ್ಚರ್ಯಚಕಿತರಾಗಿದ್ದಾರೆ !!!

ವಿಜಿನಿಯಾ ದೇಶದ, ರಿಚ್‌ಮಂಡ್ ಪಟ್ಟಣದ ಒಬ್ಬ ಹುಡುಗಿಯು ನಾಟಕ ನೋಡಲು ಹೋದಳು. ನೋಡುತ್ತಿದ್ದಂತೇ ನಗುವುದಕ್ಕೆ ಪ್ರಾರಂಭ ! ಇದು ವರೆವಿಗೂ ನಿಂತೇ ಇಲ್ಲ !! ಇದೊಂದು ಹೊಸ ರೋಗ ಎಂದು ಹೇಳುತ್ತಿದ್ದಾರೆ ವೈದರು !!!

* *

ಸತ್ತುಮೇಲೆ ಪುನಃ ಬದುಕುವುದು !

ಒಬ್ಬ ಯೋಗಿಯ ಪ್ರದರ್ಶನ !!

ಪ್ರೊಫೆಸರ್ ಯಷ್‌ಪಾಲ್ ಎಂಬ ವಿರತ್ ಪಟ್ಟಣದ ಯೋಗಿಯು ಬೊಂಬಾಯಿನಲ್ಲಿ ಅದ್ಭುತವಾದ ಕಾರ್ಯಗಳನ್ನು ನಡೆಸಿದನು. ನಾಡಿಯನ್ನು ನಿಲ್ಲಿಸುವುದು. ಭೂಮಿಯಲ್ಲಿ ಹೂಳಿಡಲ್ಪಡುವುದು, ಮುಂತಾದ ಅಮಾನುಷ ಕಾರ್ಯಗಳನ್ನು ಪ್ರದರ್ಶಿಸಿ, ಇವೆಲ್ಲವನ್ನೂ ಯೋಗಸಾಧನೆಯಿಂದ ನಡೆಸಿದುದೆಂದು ತಿಳಿಸಿದನು !

ಂ ಂ

ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಹೊಸ ಹಕ್ಕುದಾರ !

ಅರಮನೆಯನ್ನೂ, ಟಂಕಸಾಲೆಯನ್ನೂ ಇಟ್ಟಿದ್ದಾನೆ !!

ಹೆರಿಫೊರ್ಡ್‌ನಿಂದ ಏಳು ಮೈಲಿ ದೂರದಲ್ಲಿರುವ ಡ್ಯೂಚರ್ಚ್ ಎಂಬಲ್ಲಿ ಸೆಂಥಿನಿಹಾಲ್ ಎಂಬುವನು ಒಂದು ಸಣ್ಣ ಮನೆಯಲ್ಲಿದ್ದಾನೆ! ಅನೇ ಅವನ ಅರಮನೆಯಂತೆ !! ಹೆನ್ರಿ ದಿ ಯೈತ್ ಎಂಬ ಹಿಂದಿನ ದೊರೆಯ ಮನೆತನದವನೆಂದು ನೋಟೀಸುಗಳನ್ನು ಪ್ರಿಂಟ್ ಮಾಡಿ ಹಂಚುತ್ತಾನೆ! ಇವನು ವೈಂದಲು ಪೊಲೀಸಿನಲ್ಲಿ ಇನ್‌ಸ್ಪೆಕ್ಟರಾಗಿದ್ದ ! ಸರಿ, ಹಿಡಿಯಿತು ಹುಚ್ಚು !! ಕೋಸಕ್ಕೆ ರಾಜೀನಾಮೆ ಕೊಟ್ಟು ದೊರೆತನಕ್ಕೆ ತನ್ನ ದೆಂದು ಚಳುವಳಿ ನಡಿಸಿದ ! ಮಾಟಗಾರಗಳನ್ನು ರಸೆಗಳಲ್ಲಿ ಸೇರಿಸಿದ ! ಪೊಲೀಸಿನವರು ಬಂದು ಇವನನ್ನು ಹಿಡಿದು ಎಳೆದುಕೊಂಡು ಹೋದರು !! ಪೊಲೀಸು ಕೋರ್ಟಿನಲ್ಲಿ ೫೦ ಪೌಂಡು ಜಾಮೀನಿನ ಮೇಲೆ ಹುಶಾರ್ ಕೊಟ್ಟ ಬಿಟ್ಟು ಬಿಟ್ಟರು !

ಂ ಂ

ಚಿರತೆ ಮನುಷ್ಯನು !

ಮನುಷ್ಯರನ್ನು ಚಿರತೆಗಳಂತೆ ಬಗೆದು ಕೊಲ್ಲುತ್ತಾರೆ !!

ಲೈಬೀರಿಯಾ ದೇಶದಲ್ಲಿ ಗುಪ್ತಸಂಘಗಳು ತಲೆಯೆತ್ತಿವೆ. ಇವುಗಳ ಸದಸ್ಯರು ಚಿರತೆ ಚರ್ಮಗಳನ್ನು ಹೊದ್ದುಕೊಂಡು, ಕೈಗಳಿಗೆ ವ್ಯಾಘ್ರನಖವೆಂಬ ಆಯುಧವನ್ನು ಹಾಕಿಕೊಂಡು ಚಿರತೆಯಂತೆಯೇ ಮೈಮೇಲೆ ಬಿದ್ದು ಬಗೆದು ಖೂನಿ ಮಾಡುತ್ತಾರೆ. ಗ್ರಾಂಡ ಕೇವ್ ಡಿಸ್ಟ್ರಿಕ್ಟಿನಲ್ಲಿ ಇವರ ಹಾವಳಿ ಜಾಸ್ತಿಯಾಗಿದೆ !! ಸರ್ಕಾರದವರು ಇವರನ್ನು ನಾಶಗೊಳಿಸಲು ಅಲ್ಲಲ್ಲಿ ಸೈನ್ಯದ ಪಡೆಗಳನಿಟ್ಟಿದ್ದಾರೆ. ಪ್ರಜೆಗಳು ಭಯದಿಂದ ನಡುಗುತ್ತಾ ಪಲಾಯನ ಮಾಡುತ್ತಿದ್ದಾರೆ !!

ನಗರವಾರ್ತೆ

(ನಮ್ಮ ವಿಶೇಷ ಸುದ್ದಿಗಾರರಿಂದ)

ವಿದ್ಯಾಶಾಲ ಪಂಡಿತ ಮಂಡಲ

ಈ ಸಂಘದ ದ್ವಿತೀಯ ಸಮ್ಮೇಳನವು ಇದೇ ತಾ॥ ೧೦, ೧೧, ೧೨ ರಲ್ಲಿ ಮೈಸೂರು ಮಹಾರಾಜರವರ ಸಂಸ್ಕೃತಪಾಠಶಾಲೆಯಲ್ಲಿ ಜರುಗಿತು. ವಿಶ್ವವಿದ್ಯಾಲಯದ ಹುಗಾವಿ ವೈಸ್‌ಚಾನ್ಸಲರ್ ಮಾ॥ ಎಸ್. ಸುಬ್ಬರಾಯರು ತಾ॥ ೧೦ ರಲ್ಲಿ ಆರಂಭೋತ್ಸವವನ್ನು ನೆರವೇರಿಸಿದರು. ಇದಕ್ಕೆ ದರ್ಬಾರ್ ಒಕ್ಸಿ ಮಾ॥ ಲಿಂಗರಾಜೇ ಅರಸಿನವರು ಸ್ವಾಗತಸಮಿತಿ ಅಧ್ಯಕ್ಷರಾಗಿಯೂ, ಡಾ॥ ಶಾಮಶಾಸ್ತ್ರಿಗಳು ಅಧ್ಯಕ್ಷರಾಗಿಯೂ ಇದ್ದರು. ಸಮ್ಮೇಳನಕ್ಕೆ ಅನೇಕ ಪಂಡಿತರೂ, ಪುರಜನರೂ ದಯಮಾಡಿಸಿದ್ದರು.

ಮಂಗಳ ಪ್ರಾರ್ಥನೆ, ಕಾರ್ಯದರ್ಶಿಗಳ ವರದಿಯಾದಮೇಲೆ ಮಾ॥ ಸುಬ್ಬರಾಯರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ತಮ್ಮ ಭಾಷಣದಲ್ಲಿ "ಪಂಡಿತರ ಆಂಗ್ಲೇಯ ಕಲಾಪಂಡಿತರಂತೆ ಪ್ರಕಾಶಕ್ಕೆ ಬರುವುದಕ್ಕೆ ಸಭೆಮಾಡುವುದು ಯುಕ್ತ. ತಮ್ಮ ಕರ್ತವ್ಯಕೂರತೆಗಳನ್ನು ಸರಿಪಡಿಸಿಕೊಳ್ಳಬೇಕು, ಪೂರ್ವದಂತೆ ಹಳೇ ಮಾರ್ಗದಲ್ಲಿ ಹೋಗದೆ ಈಗಿನ ಪ್ರಪಂಚಪರಿಚಯ ಶಾಸ್ತ್ರಜ್ಞಾನ ವಿಸ್ತರ್ಷ, ಬೋಧನಾ ಕೌಶಲವನ್ನು ತಿದ್ದಿಕೊಳ್ಳಬೇಕು. ಇದಕ್ಕೆ ಅನೇಕ ಕಾರಣಗಳಿವೆ. ವಿಷ್ಯ ಈಗ ಜೀವನ ನಡೆಯುವುದೇ ಕಾರಣವಾಗಿ, ಹಿಂದಿನ ಮಹಾ ಮಹಾ ಪಂಡಿತರ ವಕ್ಕಳು, ಮೊಮ್ಮಕ್ಕಳು ಮಠಾಧಿಪತಿಗಳ ವಂಶೀಕರೂ ಸಹ ಲೌಕೀಕ ವಿದ್ಯೆಯನ್ನೇ ಅಭ್ಯಾಸಿಸಿ ಜೀವನ ಹುಡುಕುತ್ತಿದ್ದಾರೆ. ಅಗ್ರಹಾರ, ವೃತ್ತಿ, ರಾಜಾಶ್ರಯ, ವೈದೀಕವಿದ್ಯೆಗೆ ಪ್ರಾಚೀನ ಕಾಲದಂತೆ ದೊರೆತಿಯುವುದಿಲ್ಲ ಆದುದರಿಂದ ಎಚ್ಚರಿತು ಕಾಲದೆ ಶತಮಾನವರಿತು ನಡೆಯಬೇಕು" ಎಂದು ಹೇಳಿದರು.

ಡಾ॥ ಶಾಮಶಾಸ್ತ್ರಿಗಳು ಸಹ ಇದೇ ಧ್ಯೇಯವನ್ನು ಗುರಿಯಾಗಿ, ಸಂಸ್ಕರಣ ವಿಮರ್ಷೆ ಗ್ರಂಥಕಾಲಕ್ಷೇಪ ವಿಚಾರದಲ್ಲಿ ಭಾಷಣ ಮಾಡಿದರು. ೩೬ ಉಪನ್ಯಾಸಗಳೂ ಕೆಲವು ಕವನ ಕವಿತೆಗಳೂ ಓದಲ್ಪಟ್ಟವು. ಪಂಡಿತ ಪೊನ್ನಮ್ಮನವರು "ಸಾಂಸ್ಕೃತಿಕಭಾಷಾವಿಚಾರ" ಮತ್ತು ವಿ ಸೆಸ್ ಜಾಪಾಬಾಯಿ, ಎಂ ಎ., ರವರ "ಕನ್ನಡ ನಾಟಕದಲ್ಲಿ ಸ್ತ್ರೀ ಪಾತ್ರ" ಎಂಬ ಲೇಖನಗಳೂ; ಅಸಿಸ್ಟೆಂಟ್ ಪ್ರೊಫೆಸರ್ ನರಸಿಂಹಶಾಸ್ತ್ರಿಗಳ "ಸಂಸ್ಕೃತ ಸಾಹಿತ್ಯ" ಮತ್ತು ಡಾ॥ ಕೃಷ್ಣರವರ "ವಸುದೂತರ ದೃಷ್ಟಿ" ವಿಚಾರ, ಇವುಗಳನ್ನು ಸಭೆಯವರು ಅತ್ಯಂತ ಶ್ಲಾಘಿಸಿದರು. ಸಭೆಯು ತಾ॥ ೧೨ ನೇ ರಾತ್ರಿ ೮॥ ಗಂಟೆಗೆ ಮುಕ್ತಾಯವಾಯಿತು. ಕಾರ್ಯದರ್ಶಿಗಳಾದ ವಿದ್ವಾನ್ ವೈ ಚಂದ್ರಶೇಖರ ಶಾಸ್ತ್ರಿಗಳ ಮತ್ತು ವಿದ್ವಾನ್ ಸೀತಾರಾಮ ಶಾಸ್ತ್ರಿಗಳು ಸಭೆಗೆ ಬಹಳ ಶ್ರಮವಟ್ಟಿದ್ದು ಸೂಕ್ತವಾದದ್ದು.

ಂ ಂ

ಶ್ರೀ ಚಲುವಾಜಮ್ಮಣ್ಣಿಯವರ ನಿಧನ

ಇವರು ಇದೆ ತಾ॥ ೧೨ ನೇ ಭಾನುವಾರ ಬೆಳಿಗ್ಗೆ ೧೦ ಗಂಟೆಯಲ್ಲಿ ದೈವಾಧೀನರಾದರೆಂದು ಕೇಳಿ ವಿಶಾದಿಸುತ್ತೇವೆ. ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಇರುವರು. ಇವರಿಗೆ ಅವಶಾನ ಕಾಲದಲ್ಲಿ ಸುಮಾರು ೫೦ ವರ್ಷಗಳಾಗಿದ್ದಿತ. ಇವರು ಮಹಾಕಾಶೀವಿದ್ಯಾಪಾರಂಗನೆಯರಾಗಿದ್ದರು ಅನೇಕ ಸ್ತ್ರೀ ಸಮಾಜಕ್ಕೆ ಆಶ್ರಯಭೂತರಾಗಿದ್ದರು, ಭರತಖಂಡದಲ್ಲಿ ದೇಶಸಂಚಾರಮಾಡಿದ್ದರು. ಇವರು ಗುರುಸೇವಾ ದುರಂಧರರೂ ಮತ್ತು ದೇವತಾಭಕ್ತಿಯುಳ್ಳವರೂ ಆಗಿದ್ದರು ಇವರ ಶವ ಸಂಸ್ಕಾರವನ್ನು ರಾಜಮರ್ಯಾದೆಯಿಂದ ನಡಿಸಿದರು. ವೈರಾಣಿಗೆಯನ್ನು ನೋಡಲು ರಸ್ತೆಯಲ್ಲಿ ಸಹಸ್ರಾರು ಜನರು ಕಿಕ್ಕಿರಿದು ನೋಡುತ್ತಿದ್ದರು. ಸರ್ಕಾರಿ ಅಧಿಕಾರಿಗಳೂ, ರಾಜಮನಿತನದವರೂ, ಪುರಪ್ರಮುಖರು ಮುಂತಾದವರೆಲ್ಲ ಬಂದಿದ್ದರು.

ಂ ಂ

ಶ್ರೀ ಕೂಡ್ಲಿ-ಶೃಂಗೇರಿ ಮಠದ ಶ್ರೀ ವಾಲುಕೇಶ್ವರಸ್ವಾಮಿಗಳ ನಿಧನ

ಶುಕ್ರವಾರ ಬೆಳಿಗ್ಗೆ ೮-೪೫ ಘಂಟೆ

ಈ ಮಠಕ್ಕೆ ಇವರು ಸನ್ಯಾಸಸ್ವೀಕಾರಮಾಡಿ ೩ ವರ್ಷಗಳಾಯಿತ. ಇವರು ಸನ್ಯಾಸಸ್ವೀಕಾರ ಉದ್ದಘಟ್ಟ, ಬೊಂಬಾಯಿ ಸೀಮೆ ಆಯಿತು. ಅನಂತರ ಇವರು ಮೈಸೂರಿಗೆ ಬಂದು ಶಿಷ್ಯವರ್ಗದಿಂದಲೂ, ಮತ್ತು ಶ್ರೀಮನ್ಮಹಾರಾಜರವರಿಂದಲೂ, ಆದರಸೆತ್ಕಟ್ಟು ರಾಜಧಾನಿಯಲ್ಲಿ ೩ ವರ್ಷದಿಂದ ನಿಂತರು. ಇವರು ಮಠದ ೫೦-೬೦ ಸಾವಿರ ರೂಪಾಯಿನ ಸಾಲವನ್ನು ತೀರಿಸಿದರು. ಇವರು-ಅವರ ಪೂರ್ವಾಶ್ರಮದಿಂದಲೂ, ಭಾಷ್ಯ, ಉಪನಿಷತ್, ವೇದಾಂತ, ತರ್ಕ, ವಾದಗಳನ್ನು ತಮ್ಮ ಶಿಷ್ಯಮಂಡಲಿಗೆ ಪ್ರತಿನಿತ್ಯ ಪಾಠ ಹೇಳುತ್ತಿದ್ದರು ಮತ್ತು ಶ್ರೀಮನ್ಮಹಾರಾಜರವರಿಗೂ ಅದ್ವೈತ, ವೇದಾಂತವನ್ನು ಆಗಾಗ್ಗೆ ಅರಮನೆಗೆ ಹೋಗಿ ಪಾಠ ಹೇಳಿ ಬರುತ್ತಿದ್ದರು ಇವರು ಪೂರ್ವಾಶ್ರಮದಲ್ಲಿ ಉದ್ದಾಮಪಂಡಿತರು. ಇವರು ವಿಹಾಮಹೋಪಾಧ್ಯಾಯ ಮಹಾವಿದ್ವಾಂಸ ಪಟವನ್ನು ಪಡೆದಿದ್ದರು.

ಇವರು ಧಾರವಾಡದ ಹಾಸಗಲ್ಲಿನಲ್ಲಿ ಜನಿಸಿದರು. ಇವರಿಗೆ ೩ ಮಂದಿ ಸಹೋದರರು. ಒಬ್ಬರು ಇವರಲ್ಲಿ ಬ್ರ॥ ಶ್ರೀ॥ ಪುರಾಣಿಕ ಗಣಪತಿಶಾಸ್ತ್ರಿಗಳು ಒಬ್ಬರು. ಇವರು ಏಕಪುತ್ರ ಬ್ರ॥ ಶ್ರೀ॥ ಯಜ್ಞೇಶ್ವರ ಶಾಸ್ತ್ರಿಗಳು ಈಚೆಗೆ ಅರಮನೆ ವಿದ್ವಾಂಸಮಂಡಲಿಯಲ್ಲಿ ಸೇರಿಸಲ್ಪಟ್ಟಿದಾರೆ. ಇವರಿಗೆ ಇಬ್ಬರು ಹೆಣ್ಣು ಮಕ್ಕಳು. ಈಗ ಇವರ ಅಳಿಯಂದರು ಆಸ್ಥಾನ ವಿದ್ವಾನ್‌ರನ್ನಾಗಿ ಮಾಡಲ್ಪಟ್ಟಿರುವರು.

ಶ್ರೀ ಶಾಸ್ತ್ರಿಗಳು ತಮ್ಮ ಬಾಲ್ಯದಲ್ಲಿ ೧೬ ನೇ ವರ್ಷದಲ್ಲಿ ಸಂಸ್ಕೃತ ವ್ಯಾಸಂಗಮಾಡಿ, ಬೆಂಗಳೂರಿಗೆ ಬಂದು, ದಿವಂಗತರಾದ ಬ್ರ॥ ಶ್ರೀ॥ ವೇ॥ ಸೀತಾರಾಮ ಶಾಸ್ತ್ರಿಗಳಲ್ಲಿ ಸಾಹಿತ್ಯ, ವೇದಾಂತವನ್ನು ವ್ಯಾಸಂಗ ಮಾಡಿದರು. ಅನಂತರ ಈಗಿರುವ ಶ್ರೀ ಶ್ರೀ ಚಂದ್ರ ಶೇಖರಭಾರತಿ ಗುರುಗಳಿಗೆ ಗುರುಗಳಾಗಿ ಪಾಠಹೇಳಿದರು. ಅನಂತರ ಬೆಂಗಳೂರು ಶಂಕರಮಠದಲ್ಲಿ ಅದ್ವೈತ ಮತ್ತು ತರ್ಕಶಾಸ್ತ್ರ ಪ್ರಧಾನೋಪಾಧ್ಯಾಯರಾಗಿ ಅನೇಕ ವರ್ಷ ಕೆಲಸಮಾಡಿದರು.

ಅನಂತರ ಮೈಸೂರು ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಬ್ರ॥ ಶ್ರೀ॥ ಹರಿಹರ ಶಾಸ್ತ್ರಿಗಳು ನಿವೃತ್ತರಾದ ಮೇಲೆ, ಅದ್ವೈತ, ವೇದಾಂತ ತರ್ಕಶಾಸ್ತ್ರದ ಸ್ಪಧಾನೋಪಾಧ್ಯಾಯರಾಗಿ ಸಂಸ್ಥೆಯ ಸ್ವೀಕಾರಮಾಡುವತನಕ ಪಾಠ ಹೇಳಿದರು. ಇವರು ಕಾಂಚೀ ಕ್ಷೇತ್ರದಲ್ಲಿ ನಡೆದ ಅಖಿಲಭಾರತ ಬ್ರಾಹ್ಮಣ ಸಮ್ಮೇಳನಕ್ಕೆ ಆಹ್ವಾನಿತರಾಗಿ ಹೋಗಿದ್ದರು. ಅಲ್ಲೂ ಮತ್ತು ರಾಜಧಾನಿಯ ಪರಕಾಲ ಮಠದಲ್ಲೂ ನಡೆದ ಸಭೆಗಳಲ್ಲಿ (೧೯೩೬) ಪಂಡಿತ ಮದನಮೋಹನ ಮಾಳವೀಯರು, ಜಾತಿಭ್ರಷ್ಟರಾದ ಸವರ್ಣ ಹಿಂದೂಗಳ ಪ್ರಾಯಶ್ಚಿತ್ತ ವಿಚಾರವಾಗಿಯೂ, ಹರಿಜನರ ಉದ್ಧಾರ ವಿಷಯವಾಗಿಯೂ, ಶಾಸ್ತ್ರೀಯವಾದ ನಡೆದಾಗಿ, ನಿರ್ದಾಕ್ಷಿಣ್ಯವಾಗಿ ಅವರನ್ನು ಖಂಡಿಸಿದರು. ಇವರು ಚಿತ್ರದುರ್ಗ ಇತರ ಕಡೆ ನಡೆದ ಪಶುಯಜ್ಞದಲ್ಲಿ ದೀಕ್ಷೆಯನ್ನು ವಹಿಸಿ ಹೋಗಿದ್ದಾಗ, ಆಧುನಿಕ ಸಂಸ್ಕರ ಸಂಘದವರೂ, ಪ್ರಾಣಿದಯಾಪರ ಸಂಘದವರೂ ಮುಂತಾದವರು ಕೇಳಿದ ಪ್ರಶ್ನೆಗಳಿಗೆಲ್ಲಾ ಶ್ರುತಿಸ್ಮೃತಿ ಲೌಕಿಕೋಕ್ತಿ ನ್ಯಾಯವನ್ನು ಹೇಳಿ ಒಪ್ಪಿಸಿ, ಪಶುಯಜ್ಞ ಮಾಡುವ ಅದ್ವೈತ ಪದ್ಧತಿಯು ಶಾಸ್ತ್ರಾಧಾರವಾದುದೆಂದೂ ಅಹಿಂಸಕರವಾದುದೆಂದೂ ಸಾರಿಹೇಳಿದರು. ಇವರು ೨ ತಿಂಗಳುಗಳಿಂದ ಖಾಯಿಲೆಯಾಗಿದ್ದರು

ಇವರು ನಿಧನರಾಗುವುದಕ್ಕೆ ಮುಂಚೆ ಶ್ರೀಮನ್ಮಹಾರಾಜರು; ಸಂದರ್ಶಿಸಿದ್ದರು. ಇವರ ಸಮಾಧಿಯು ರಾಜಮರ್ಯಾದೆಯಿಂದ ಸಂಸ್ಕೃತ ಪಾಠಶಾಲೆಯ ಉತ್ತರ ಮೈದಾನದಲ್ಲಿ ಶ್ರೀಮನ್ಮಹಾರಾಜರವರ ಆಜ್ಞೆಯಂತೆ ಏರ್ಪಟ್ಟಿದ್ದು ಶ್ಲಾಘ್ಯ. ಇವರ ನಿಧನದ ವೀರವಣಿಗೆಯಲ್ಲಿ ಆದಮನಿ ಆಫೀಸರುಗಳೂ, ಖಾಸಗಿ ದೊಡ್ಡ ಮನುಷ್ಯರೂ ಇದ್ದರು. ಇದನ್ನು ನೋಡಲು ಸಹಸ್ರಾರು ಜನರು ದಾರಿಯುದ್ದಕ್ಕೂ ನಿಂತಿದ್ದರು. ಇವರ ಸಮಾಧಿ ಮುಗಿದು ಪ್ರಸಾದ ವಿನಿಯೋಗವಾದಾಗ ೪॥ ಗಂಟೆಯಾಗಿದ್ದಿತು.



ಸತ್ಯವಾದಿ

ಶಿಶುಗಳ ಮರಣ ಸಮಸ್ಯೆ

ನಮ್ಮ ನಾಗರಿಕರು ಹೇಳುವಂತೆ ನಮ್ಮ ಸಾಂಘಿಕ ಆಚಾರಗಳು ಈ ಶಿಶುಮರಣಕ್ಕೆ ಕಾರಣವೇ ಏನೆಂಬುದನ್ನು ಯೋಚಿಸೋಣ—

೧. **ಬಾಲ್ಯವಿವಾಹ**—ಬಾಲ್ಯವಿವಾಹದವರ ಮಕ್ಕಳು ಈಗಲೂ ಎಷ್ಟು ಮಂದಿ ಇರವದಿಲ್ಲ. ಅವರು ಎಷ್ಟುಕಾಲ ಜೀವಿಸುವರು. ಎಷ್ಟು ಆರೋಗ್ಯವಂತರಾಗಿರುವರು. ಎಷ್ಟು ಬುದ್ಧಿವಂತರಾಗಿರುವರು. ಅವರಲ್ಲಿ ನೂರಕ್ಕೆ ಎಷ್ಟು ಮಂದಿ ಇಂತಹವರಿರುವರೋ ಅಂತಹ ಸ್ಥಿತಿಯಲ್ಲಿರುವವರು ಪ್ರೌಢವಿವಾಹವಾದವರಲ್ಲಿ ಎಷ್ಟು ಮಂದಿ ಇರುವರು? ಸೆನ್ಸಸ್ ತೆಗೆದು ನೋಡಿದಲ್ಲಿ ಎಲ್ಲಾ ಬಟ್ಟಬಯಲಾಗುವದು. ಮಾಕ್‌ಕಾರ್ಸರ್ ಹೇಳುತ್ತಾರೆ— ಪಶ್ಚಿಮ ಸಂಜಾಪನಲ್ಲಿಯೂ, ವಾಯವ್ಯ ಸರಹದ್ದು ಪ್ರಾಂತ್ಯಗಳಲ್ಲಿಯೂ ಇರುವಂಥ ಉತ್ತಮ ಕಾಯಿಪುಷ್ಟಿಯುಳ್ಳ ಮನುಷ್ಯರು ಇಡೀ ಪ್ರಪಂಚದಲ್ಲೆಲ್ಲಿಯೂ ಇರುವದಿಲ್ಲ.

೨. **ಘೋಷಾಪದ್ಧತಿ**—ಹೆಂಗಸರು ಸಾಧಾರಣವಾಗಿ ಮನೆಯಲ್ಲಿಯೇ ಇರಬೇಕೆಂಬ ಪದ್ಧತಿ ಇರುವದರಿಂದಲೇ ಇಲ್ಲಿ ಫರಂಗಿವ್ಯಾಧಿಯಿಂದ ಪೀಡಿತರಾಗಿರುವ ಸಂಖ್ಯೆಯು ಕಡಿಮೆಯಾಗಿರುವಿಕೆ. ಪೂರ್ವಾಚಾರ ಪದ್ಧತಿಗಳು ವ್ಯತ್ಯಾಸವಾಗದೆ ಇರಲು ಈ ಪದ್ಧತಿಯು ಒಂದು ಬಗೆಯಲ್ಲಿ ಸಹಾಯಕಾರಿಯಾಗಿರುತ್ತದೆ.

೩ ಮೇಲಿನ ಎರಡು ಕಾರಣಗಳಿಂದ ಕ್ಷಯ ವ್ಯಾಧಿಯು ಪ್ರಬಲವಾಗಿ ಮರಣಗಳು ಹೆಚ್ಚುತ್ತಿರುವಕೆ:—ಹಿಂದೂಗಳು ಬಹಳವಟ್ಟಿಗೆ ಮಾಂಸಾಹಾರಿಗಳಲ್ಲ. ಲೆಕ್ಕಗಳ ಪ್ರಕಾರ ಮಾಂಸಾಹಾರಿಗಳಲ್ಲಿ ಕ್ಷಯವ್ಯಾಧಿಯು ತಲೆಯೆತ್ತಲವಕಾಶವಿರುವದಿಲ್ಲ.

೧೦೦೦ ಕ್ಕೆ ಮರಣಗಳ ಸಂಖ್ಯೆ

	ಹಿಂದುಗಳು	ಮುಸ್ಲಿಂರು	ಕ್ರಿಶ್ಚಿಯನ್ನರು
೧೯೨೬	೨.೫೫	೩.೫	೩.೭
೧೯೨೭	೨.೭	೩.೬	೪.೪

ಆದುದರಿಂದ ಕ್ಷಯವ್ಯಾಧಿಯ ಪ್ರಾಬಲ್ಯಕ್ಕೆ ಬಾಲ್ಯವಿವಾಹ, ಘೋಷಾಪದ್ಧತಿಗಳು ಕಾರಣಗಳಲ್ಲ. ಆಂದರೆ ಹೆಚ್ಚು ಶಿಶುಗಳ ಮರಣಕ್ಕೆ ಇವು ಕಾರಣಗಳೆನ್ನಲಾಗುವದಿಲ್ಲ.

ಹಿಂದೂಸ್ಥಾನದಲ್ಲಿ ವಿವಾಹಗಳು ಪೂರ್ವವಯಸ್ಸಿನಲ್ಲಾಗುವದರಿಂದ ಹುಡುಗಿಯರು ೧೩—೧೪ ನೆಯ ವರ್ಷದಲ್ಲಿಯೇ ಮಕ್ಕಳನ್ನು ಹೆರುವದರಿಂದ ಅಂತಹ ಮಕ್ಕಳು ಸಾಯುವರೆನ್ನುವರು. ಇಂತಹವರೇ ಚಿರಂ

ಅನುಕೂಲ ದಾಂಪತ್ಯ

ಒಂದು ಕಥೆ

ಮೋಹನರಾವ್ ಮದರಾಸಿನಲ್ಲಿ ಬಿ.ಎ., ಪರೀಗೆ ಓದುತ್ತಿದ್ದಾನೆ. ಬೇಸಿಗೆ ರಜಾಕ್ಕೆ ಮನೆಗೆ ಬಂದಿದ್ದಾನೆ. ಮಹಾಲಕ್ಷ್ಮಮ್ಮನವರಿಗೆ ಮೋಹನರಾವಿನ ಮೇಲೆ ಬಹಳ ಪ್ರೀತಿ. ತಾಯಿಗೆ ಎಷ್ಟು ಪ್ರೀತಿಯೋ ತಂದೆಗೆ ಅಷ್ಟು ವಿರೋಧ.

ಮೋಹನರಾವ್ ಹೆಚ್ಚು ವ್ಯಯ ಮಾಡುವನೆಂದು ತಂದೆಗೆ ಕೋಪ. ಅದೂ ಅಲ್ಲದೆ ತನ್ನ ಇಷ್ಟದಂತೆ ಮದುವೆಮಾಡಿಕೊಳ್ಳಲಿಲ್ಲವೆಂದೂ ಕೋಪ. ಕಳೆದ ವರ್ಷ ಬಿ.ಎ., ಪರೀಕ್ಷೆಯಲ್ಲಿ ಪ್ಯಾಸಾಗದಿದ್ದುದರಿಂದ ಅದೂ ಸೇರಿತು. ಈ ಕೋಪವನ್ನೆಲ್ಲಾ ಮಹಾಲಕ್ಷ್ಮಮ್ಮನವರ ಮೇಲೆ ತೋರಿಸುತ್ತಿದ್ದರು ರಾಮರಾಯರು. ಗಂಡನು ಎಷ್ಟು ಕೋಪಗೊಂಡರೂ ಶಾಂತತೆಯಿಂದ ಇರುತ್ತಿದ್ದಳು, ಮಹಾಲಕ್ಷ್ಮಮ್ಮನು.

ರಾಮರಾವ್ ಕೆಲವು ವರ್ಷಗಳಿಂದ ವಕೀಲರಾಗಿದ್ದರು. ಒಳ್ಳೇ ವರಮಾನ. ಒಂದು ಮಹಡಿ ಮನೆಯನ್ನು ಕಟ್ಟಿಸಿದ್ದರು. ಬಹಳ ಬುದ್ಧಿಶಾಲಿಯಾದುದರಿಂದ ದೊಡ್ಡಸ್ಥಿತಿಪರರಾಗಿ ಹೆಚ್ಚು ಕೀರ್ತಿಯನ್ನು ಸಂಪಾದಿಸಿದರು.

ಮೋಹನರಾವ್ ಒಬ್ಬನೇ ಮಗನಾದುದರಿಂದ ಎಂ.ಎ., ಪರೀಕ್ಷೆಗೆ ಓದಿಸಬೇಕೆಂದು ಅಂದುಕೊಳ್ಳುತ್ತಿದ್ದರಾದರೂ ಅತನ ವ್ಯವಹಾರಗಳನ್ನು ಕಂಡು ಅಸಹ್ಯಗೊಳ್ಳುತ್ತಿದ್ದರು.

೨

ಸಾಯಂಕಾಲ ೬ ಗಂಟೆಯಾಗಿದೆ. ಮೋಹನರಾವ್ ಕೋಣೆಯಲ್ಲಿ ಪುಲಗಿಕೊಂಡು, ಮೇಗಜೀನ್ ಓದುತ್ತಿದ್ದಾನೆ. ಕಮಲಳು "ಮಹಾಲಕ್ಷ್ಮಮ್ಮ ಅತ್ತೆ" ಎನ್ನುತಾ ಕೋಣೆಯೊಳಕ್ಕೆ ಬಂದಳು. ಮೋಹನರಾವನ್ನು ಕಂಡು ನಾಚಿಕೆಯಿಂದ ತಲೆಬಗ್ಗಿಸಿಕೊಂಡು ಓಡಿಹೋದಳು. ಮೋಹನರಾವಿಗೆ ಕಮಲಳ ಮೋರೆಯನ್ನು ಕಂಡಂದಿನಿಂದ ಮನಸ್ಸು ಬದಲಾಯಿಸಿತು. ಮೋರೆಯೆಲ್ಲಾ ಬೆವರು ಹಿಡಿಯಿತು. ಕಮಲಳನ್ನು ಯಾವಾಗ ನೋಡುವೆನೋ ಎಂದು ಆತುರಪಡುತ್ತಿದ್ದನು. ಕಮಲಳು ರಾಮರಾಯರ ತಂಗಿಯ ಮಗಳಾದುದರಿಂದ ಆಗಿಂದಾಗ್ಗೆ ರಾಮರಾಯರ ಮನೆಗೆ ಒರುತ್ತಿದ್ದಳು. ಕಮಲಳಿಗೆ ಚಿಕ್ಕಂದಿನಲ್ಲೇ ತಂದೆ ತಾಯಿಗಳು ಮರಣಹೊಂದಿದ್ದರಿಂದ ಸುಂದರರಾಯರ ಮನೆಯಲ್ಲಿಯೇ ಇದ್ದಳು. ಮೋಹನರಾವೂ, ಕಮಲಳೂ ಚಿಕ್ಕಂದಿನಲ್ಲಿ ಕಲೆತುಮಲೆತು ಆಡಿಕೊಳ್ಳುತ್ತಿದ್ದರು.

೩

ಸಾಯಂಕಾಲಸಮಯದಲ್ಲಿ ಸರೋಜಿನೀ, ಕಮಲ, ಇಬ್ಬರೂ ಮನೆಯ ಹಿಂಭಾಗದ ತೋಟದಲ್ಲಿದ್ದ ಗುಲಾಬಿ ಗಿಡದ ಕಳಗೆ ಕುಳಿತು ಮಾತನಾಡಿಕೊಳ್ಳುತ್ತಿದ್ದರು. ಇಷ್ಟರೊಳಗೆ ರಾಜ್ಯಂ ಕೂಡ ಬಂದಳು. ಕಮಲ ಕೊಂಬೆಗಳನ್ನು ಬಗ್ಗಿಸಿ ಹೂಗಳನ್ನು ಕೊಯುತ್ತಿದ್ದಳು. ಮೋಹನರಾವು, ಸುಂದರರಾಯರ ಮನೆಯ ಕಾಂಪೌಂಡು ಗೋಡೆಯಮೇಲೆ ನಿಂತುಜೊಂಡನು. ಕಮಲ ಹೂ ಕೊಯ್ಯುತ್ತಿದ್ದದ್ದನ್ನು ಕಂಡನು, "ಕಮಲಾ, ನನಗೂ ಕೆಲವು ಹೂಗಳನ್ನು ಕೊಡುವಿಯಾ?" ಎಂದು ಕೇಳಿದನು. ನಾಚಿಕೆಯಿಂದ ತಲೆಬಾಗಿಸಿಕೊಂಡಳು. ಇಷ್ಟರಲ್ಲಿ ಒಳಗಿನಿಂದ "ಸರೋಜನೀ" ಎಂಬ ಕೂಗು ಕೇಳಿಬಿತು. ಸರೋಜಿನೀ, ರಾಜ್ಯಂ, ಇಬ್ಬರೂ ಒಳಗೆ ಹೋದರು.

ಮೋಹನರಾವು ಕಾಂಪೌಂಡು ಗೋಡೆಯಿಂದ ಇಳಿದು ಗುಲಾಬಿ ಗಿಡದ ಹತ್ತಿರಕ್ಕೆ ಬಂದನು. ರೆಂಬೆಗಳಿಂದ ಹೂವ್ವನ್ನು ಕೊಯುತ್ತಿದ್ದ ಕಮಲಳನ್ನು ಪೂರ್ಣಾಲಿಂಗನವಾಡಿಕೊಂಡನು. "ಕಮಲ, ನಿನ್ನ ಮದುವೆ ಯಾವಾಗ" ಎಂದು ಕೇಳಿದನು. ನಾಚಿಕೆಯಿಂದ ತಲೆಬಗ್ಗಿಸಿ "ಏನೋ ನನಗೆ ತಿಳಿಯದು" ಎಂದಳು. "ಯಾರನ್ನೂ ಮದುವೆ ಮಾಡಿಕೊಳ್ಳುತ್ತಿ?" ಎಂದು ಕೇಳಿದನು. "ನಿನ್ನನ್ನೇ" ಅಂದಳು. ಒಳಗಿನಿಂದ "ಕಮಲ" ಎಂಬ ಕೂಗು ಕೇಳಬಂದಿತು. ಮೋಹನನ ಆಲಿಂಗನದಿಂದ ಬಿಡಿಸಿಕೊಂಡು ಓಡಿಹೋದಳು. ಮೋಹನನೂ ಕಮಲಳನ್ನು ಹಾಗೇ ದೃಷ್ಟಿಸಿ ನೋಡುತ್ತಾ ನೋಡುತ್ತಾ ಹಾಗೆ ಕೆಳಕ್ಕೆ ಬಿದ್ದನು. ಕಣ್ಣು ತೆರೆದು ನೋಡುವವೇಳೆಗೆ ತನ್ನ ಕೋಣೆಯಲ್ಲಿ ಹಾಸಿಗೆಯ ಮೇಲಿರುವಂತೆ ಅರಿತನು.

[ಮುಂದುವರಿಯುವುದು.

ಪರದೇಶದಿಂದ ಇಂಡಿಯಾಕ್ಕೆ ವರ್ಷಕ್ಕೆ ೫೦, ೬೦ ಲಕ್ಷ ರೂಪಾಯಿಗಳ ಬಿಸ್ಕತ್ತುಗಳು ಬರುವುವೆಂದು ತಿಳಿಯಬಂದಿದೆ.

೦ ೦

ಶಿರೋಮಣಿ ಸಿಕ್ ಮತ ಪ್ರಚಾರ ಪರಿಷತ್ತಿನವರು ಹರಿಜನರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಏರ್ಪಾಡು ಮಾಡುತ್ತಿರುವರು.

ಗುಲಿಸ್ತಾನ್

(ಕಾಪಿರೈಟ್)

ರಾಜನೀತಿ

೧೯

ಸುಶಿರೋವಾನನು ಬೇಟೆಗೆ ಹೋಗಿದ್ದಾಗ ಬೇಟೆಯಾಡಿ ತಂದದನ್ನು ಅವನ ಊಟಕ್ಕೆ ಕಂದು ಸಜ್ಜುಪಡಿಸುತ್ತಿದ್ದರು. ಆಗ ಉಪ್ಪಿಲ್ಲದಿರಲು ಅದನ್ನು ತರಲೆಂದು ಒಬ್ಬ ಭೃತ್ಯನನ್ನು ಹತ್ತಿರದ ಹಳ್ಳಿಗೆ ಕಳುಹಿಸುವದರಲ್ಲಿದ್ದರು. ನುಶಿರೋವಾನನು ಆ ಭೃತ್ಯನನ್ನು ಕುರಿತು, "ಅದಕ್ಕೆ ಸರಿಯಾದ ಬೆಲೆಯನ್ನು ಕೊಟ್ಟು ತೆಗೆದುಕೊಂಡು ಬಾ; ಹಿಂಸಿಸಿ ಬಲವಂತದಿಂದ ತರಬೇಡ. ಏಕೆಂದರೆ, ಇದರಿಂದ ಒಂದು ಕೆಟ್ಟ ಉದಾಹರಣೆಯು ಸ್ಥಾಪಿತವಾಗಿ, ಹಳ್ಳಿಯು ಪಾಳಾಗಿ ಹೋಗಬಹುದು" ಎಂದನು. ಅದಕ್ಕೆ ಅವರು, "ಈ ಅಲ್ಪ ವಿಷಯದಿಂದ ನಷ್ಟವೇನಾದೀತು?" ಎಂದು ಕೇಳಿದರು. ಆಗ ನುಶಿರೋವಾನನು, "ಮೊಟ್ಟ ಮೊದಲು ಪ್ರಪಂಚದಲ್ಲಿ ದಬ್ಬಾಳಿಕೆಯು ಸಣ್ಣ ವಿಷಯಗಳಿಂದಲೇ ಶುರುವಾಯಿತು. ಹೊಸದಾಗಿ ಬಂದವರೆಲ್ಲರೂ ಈ ಉಪದ್ರವವನ್ನು ಹೆಚ್ಚಿಸುತ್ತಾ ಪ್ರಕೃತ ಸ್ಥಿತಿಗೆ ತಂದಿರುವರ—ರಾಜನು ಬಡ ರೈತನ ತೋಟದಿಂದ ಒಂದು ಸೇಬಿನ ಹಣ್ಣನ್ನು ತಿಂದರೆ ಅವನ ಅಂಗರಕ್ಷರೋ ಅಥವಾ ಗುಲಾಮರೋ ಗಿಡವನ್ನೇ ನಿರ್ಮೂಲವಾಗಿ ಒಕ್ಕಿಸುವರು; ದೊರೆಯು ಐದು ಮೊಟ್ಟೆಗಳನ್ನು ತರಲು ಅಪ್ಪಣೆ ಮಾಡಿದರೆ ಅವನ ಸೈನಿಕರು ಸಾವಿರ ಕೋಳಿಗಳನ್ನೇ ನಿರ್ಮೂಲಗೊಳಿಸುವರು" ಎಂದು ಉತ್ತರ ಕೊಟ್ಟನು

ಬಿಡಿನುಡಿಗಳು

ದಾನವನ್ನು ತೆಗೆದುಕೊಳ್ಳುವದಕ್ಕಿಂತ ದಾನ ಮಾಡುವುದು ಕೈಗೆ ಭೂಷಣವು

ಸ್ವಾಮಿ ದ್ರೋಹವೆಂಬುದು ಅತಿ ಭಾರವಾದದ್ದು. ಆದುದರಿಂದ ಜನರು ಈ ಗುಣದಿಂದ ದೂರರಾಗತಕ್ಕದ್ದು.

ಯಾವ ಒಗೆಯ ಮಾದಕ ದ್ರವ್ಯವನ್ನಾಗಿ, ಬೀಡಿ, ಚುಟ್ಟಾ, ಸಿಗರೇಟು, ನಸ್ಯ, ಹೊಗೇಸೊಪ್ಪು ಇತ್ಯಾದಿಗಳನ್ನಾಗಲಿ ಉಪಯೋಗಿಸದೆ ಇರುವರೇ ದೇವರ ಸಹೋಪವರ್ತಿಗಳು, ಮಿಕ್ಕವರು ದೂರರು.

ವೈದ್ಯಭಕ್ತರಿಗೆ ಸಾವೆಲ್ಲಿಯದ್ದು? ಅವರು ಅನಿತ್ಯತೆಯಿಂದ ನಿತ್ಯತ್ವವನ್ನು ಹೊಂದುವರು.

ಅನಾಥರಿಗೂ, ವ್ಯಾಧಿಗ್ರಸ್ಥರಿಗೂ, ಹಸಿವೆಯಿಂದ ನರಳುತ್ತಿರುವವರಿಗೂ ಅದಷ್ಟು ಸಹಾಯ ಮಾಡು.

ದುಸ್ಸಂಗತ್ವಕ್ಕಿಂತ ನಿಸ್ಸಂಗತ್ವವು ಲೇಸು. ನಿಸ್ಸಂಗತ್ವಕ್ಕಿಂತ ಸತ್ಸಂಗತ್ವವು ಲೇಸು. ಮೌನವಾಗಿರುವದಕ್ಕಿಂತ ಜ್ಞಾನಿಯೊಂದಿಗೆ ಮಾತನಾಡುತ್ತಿರುವದು ಲೇಸು.

ಯಾರನ್ನೂ ಶಪಿಸಬಾರದು. ಮನುಷ್ಯನು ಹುಟ್ಟಿರುವದು ದಯೆಯನ್ನು ಹಂಡಲಿಕ್ಕಾಗಿ, ಕ್ರೋಧವನ್ನಲ್ಲ.

ಓಂ.

ವಿವಿಧ ವಿಷಯಗಳು

ಕಾರ್ಮೇರದಲ್ಲಿ ಮಂಜುಗಡ್ಡೆಯು ಬಿದ್ದಿದ್ದರಿಂದ ೨೦೦ ಮಂದಿ ಮರಣಹೊಂದಿದರು.

ಪ್ರಪಂಚದಲ್ಲಿ ಈಗ ವರ್ಷಂಪ್ರತಿ ಆರು ಸಾವಿರ ಐನೂರು ಕೋಟಿ ಸಿಗರೇಟ್ಟುಗಳನ್ನು ಮಾನವ ಜಾತಿಯು ಸೇದುತ್ತಿರುವದು.

ಎಸ್ಪರಾಂಟೋ ಭಾಷೆಯನ್ನು ವಿಶ್ವಭಾಷೆ ಎಂದು ಕರೆಯುವರು. ಗಂಡಸರ ಹೆಂಗಸರ ಪತ್ರವ್ಯವಹಾರಕ್ಕೆ ಇದನ್ನು ವಿದೇಶಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿರುವರು.

ಡಾರ್ಜಿಲಿಂಗು ಡಿಸ್ಟ್ರಿಕ್ಟಿನೊಳಗೆ ಬೆಂಗಾಲೀಯುವಕರು ಯಾರೂ ಹೋಗಕೂಡದೆಂದು ಸರ್ಕಾರದವರು ಆರ್ಡರು ಮಾಡಿರುವರು.

ತಿರುನಲ್ವೇಲಿ—ತಿರಚ್ಚಂದೂರು ರೈಲ್ವೆಯನ್ನು ತಾವು ನಡೆಸಲಾಗದೆಂದು ದಕ್ಷಿಣ ಇಂಡಿಯಾ ರೈಲ್ವೆ ಕಂಪೆನಿಯವರು ನೋಟೀಸುಕೊಟ್ಟಿದ್ದರನಂತರ ಡಿಸ್ಟ್ರಿಕ್ಟ್ ಬೋರ್ಡಿನವರು ಆ ಕಂಪೆನಿಯವರೇ ನಡೆಸಬೇಕೆಂಬ ತೀರ್ಮಾನವನ್ನು ಮಾಡಿ ಕಂಪೆನಿಯವರಿಗೆ ಕಳುಹಿಸಿರುವರು.

ರಾವಲ್ಪಿಂಡಿಯಲ್ಲಿ ಒಂದು ಸುಸಂಸಾರ—ತಂದೆ, ಮುವ್ವರು ಹೆಣ್ಣುಮಕ್ಕಳು. ದಾರಿದ್ರಬಾಧೆಯನ್ನು ಸಹಿಸಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡರು. ಹರಿಪೂರ್ ಸಬ್‌ಸೆಲರ್ ರೈಲು ದಾರಿಯ ಮೇಲೆ ಸ್ವಲ್ಪ ಸ್ವಲ್ಪ ದೂರದಲ್ಲಿ ೪ ಮಂದಿಯ ಶವಗಳು ಕಂಡುಬಂದವು.

ಇಂಗ್ಲೆಂಡಿನಲ್ಲಿಯ ವಿಮಾನಾಶ್ರಯದಲ್ಲಿ ೧೧ ದೊಡ್ಡ ವಿಮಾನವನ್ನು ಮೇಲೆ ಹಾರಿಸಿ ಅದರಿಂದ ಬೇಗ ಬೇಗ ಅನೇಕ ಬಾಂಬುಗಳನ್ನು ಬೀಳಿಸಿದರೆಂದೂ ೧೦ ನಿಮಿಷಗಳೊಳಗೆ ಈ ವಿಮಾನವು ೪೫ ಮೈಲು ಹೋಯಿತಂದೂ ತಿಳಿದುಬಂದಿರುವದಾಗಲಿ, ಮಿಕ್ಕ ವಿಷಯಗಳನ್ನು ರಹಸ್ಯವಾಗಿ ಇಟ್ಟಿರುವರು. ಬಹಳ ಜಾಗ್ರತೆಯಲ್ಲಿ ಬಾಂಬುಗಳ ಸಂಖ್ಯೆಯನ್ನು ಸರಿಸಿ ಅಪಾರ ನಷ್ಟವನ್ನುಂಟುಮಾಡಬಲ್ಲ ವಿಮಾನಗಳನ್ನು ಇಂಗ್ಲೆಂಡು ಕೂಡ ತಯಾರಿಸಿರುವದೆಂದು ಇದರಿಂದ ಸ್ಪಷ್ಟವಾಗುತ್ತದೆ.

ಅವೇರಿಕದಲ್ಲಿ ಒಬ್ಬ ಸೋಪು ತಯಾರು ಮಾಡುವ ಕಾರ್ಖಾನೆಯ ಮಾಲೀಕನಿರುವನು ಅಲ್ಲಿ ತಯಾರಾಗುವ ಸಾಬೂನು ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸಲು ಅತನು ಪ್ರತಿ ಸಾಬೂನನ್ನೂ ಕಚ್ಚಿ ನೋಡುತ್ತಾನೆ. ಹೀಗೆ ಅತನು ಮಾಡುವ ಕೆಲಸ ಮತ್ತೊಬ್ಬನಿಗೆ ಸರಕಾರದ ಪರಿಶ್ರಮಗಳ ಶಾಖೆಯಲ್ಲಿ ಕೆಲಸ. ಅತನ ವಿಮಾನುಗಳ ವಿಷಯದಲ್ಲಿ ಪರಿಶೋಧನೆ ಮಾಡುವ ಅಧಿಕಾರಿ. ಅತನ ಕೆಲಸವೇನೆಂದರೆ—ಸಮುದ್ರದ ನೀರನ್ನು ರುಚಿ ನೋಡುವದು. ನೀರಿನ ರುಚಿಯನ್ನು ಹಿಡಿದು ವಿಮಾನುಗಳು ಎಲ್ಲಿ ಹೆಚ್ಚಾಗಿವೆಯೋ ಅತನು ಹೇಳಬಲ್ಲವನಾಗಿರುವನು.

ಬೆಳ್ಳುಳ್ಳಿಯು ಕ್ಷಯರೋಗದಲ್ಲಿ ಹೆಚ್ಚಿನ ಸಮಾಡುವದೆಂದು ಜರ್ಮನ್ ಡಾಕ್ಟರೊಬ್ಬನು ಕಂಡುಹಿಡಿದಿರುವನು. ಬೆಳ್ಳುಳ್ಳಿಯ ಘಂಟು ಕ್ಷಯದ ಕ್ರಿಮಿಗಳನ್ನು ನಾಶಗಡಿಸುವವಂತೆ.

ನಂದೂರಿನ ಮ|| ರಾಮಾನುಜಾಚಾರ್ಯರ್ ಎಂಬ ವೈಷ್ಣವನು ಕೆಲವು ದಿನಗಳ ಕೆಳಗೆ ಗುಂಟೂರಿನಲ್ಲಿ ಶ್ರೀಮತಿ ಲೀಲಾವತಿ ಎಂಬ ಹರಿಜನ ಕನ್ನಿಕೆಯನ್ನು ವಿವಾಹಮಾಡಿಕೊಂಡನು. ಈ ದಂಪತಿಗಳನ್ನು ರಾಜಮಹೇಂದ್ರದಲ್ಲಿ ಆದಿ ಆಂಧ್ರರು ಊರುಸುತ್ತಲೂ ಮೆರವಣಿಗೆ ಮಾಡಿ ಅನಂತರ ಕಾಂಗ್ರೆಸ್ ಮಂದಿರದಲ್ಲಿ ಸಭೆ ಸೇರಿದರೆಂದೂ, ಶ್ರೀಮ|| ರಾಮಾನುಜಾಚಾರ್ಯರೂ, ಶ್ರೀಮತಿ ಲೀಲಾವತಿಯೂ ಸಭೆಯಲ್ಲ ಭಾಷಣ ಮಾಡಿದರೆಂದೂ ತಿಳಿದುಬಂದಿದೆ.

ಕಾನ್‌ಪುರಕ್ಕೆ ಸೇರಿದ ನವಾಘರ್ ಎಂಬಲ್ಲಿ ಪೋಲೀಸಿನವರು ಇಬ್ಬರನ್ನು ದಸ್ತಗಿರಿಮಾಡಿರುತ್ತಾರೆ. ಇವರು ಹೆಣ್ಣು ಮಕ್ಕಳನ್ನೂ, ಹೆಂಗಸರನ್ನೂ, ವಿಧವೆಯರನ್ನೂ ಅಪಹರಿಸಿಕೊಂಡು ಹೋಗಿ ಅವರನ್ನು ಪಂಜಾಬಿನಲ್ಲಿ ಮಾರುತ್ತಿದ್ದರೆಂದು ಹೇಳಲಾಗಿದ್ದೆ. ಸಂಯುಕ್ತ ಪ್ರಾಂತ್ಯದ ನಾನಾ ಡಿಸ್ಟ್ರಿಕ್ಟುಗಳಲ್ಲಿ ಇಂಥವರು ಅನೇಕರಿರುವುದಾಗಿಯೂ, ಇದುವರೆಗೆ ಸುಮಾರು ೬೨ ಮಂದಿ ಹೆಂಗಸರನ್ನು ಅವರುಗಳು ಹೀಗೆಯೇ ಎತ್ತಿಕೊಂಡು ಹೋಗಿ ಪಂಜಾಬಿನಲ್ಲಿ ತಲಾ ೧,೦೦೦ ರೂಪಾಯಿನಂತೆ ಮಾರಿರುತ್ತಾರೆಂದೂ ಹೇಳಲಾಗಿದೆ.

ಆಕಳುಗಳಿಗೆ ಕ್ಷಯರೋಗವು ಬಹಳ ಬೇಗ ತಗಲುವದೆಂದೂ, ಅಂತಹ ಗೋವುಗಳ ಹಾಲನ್ನು ಕುಡಿಯುವ ಮನುಷ್ಯರಿಗೆ ಕೂಡ ಆ ವ್ಯಾಧಿಯು ನಿರುಷಗಳ ಲೆಕ್ಕದಲ್ಲಿ ಸಂಕ್ರಮಿಸುವದೆಂದೂ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರು. ಆ ಪ್ರಾಣಿಗಳಲ್ಲಿ ಕ್ಷಯವ್ಯಾಧಿಯು ಬರದಂತೆ ಮಾಡಲು ಅವುಗಳಿಗೆ ಕೂಡ ಇಂಜೆಕ್ಷನ್ನು ಕೊಡಲಿರುವರು. ಇಂಗ್ಲೆಂಡಿನಲ್ಲಿ ಇದಕ್ಕಾಗಿ ೧|| ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗುವದು.

ರೂಪರ್ಟ್ ಬೆಲಿವಿಲಿ ಎಂಬಾತನು ಇಂಪೀರಿಯಲ್ ಏರ್‌ವೇಲ್ ವಿಮಾನವಾದ ಹಿರಕ್ಲಿಸ್‌ನಲ್ಲಿ ಪ್ಯಾರಿಸ್‌ನಿಂದ ಲಂಡನ್ನಿಗೆ ಪ್ರಯಾಣಮಾಡುತ್ತಿರಲಾಗಿ ಸಿಗರೇಟನ್ನು ಸೇದಿದನು. ಅದಕ್ಕಾಗಿ ಅತನಿಗೆ ೧೦ ಪೌಂಡು ಜುಲ್ಮಾನೆಯನ್ನು ವಿಧಿಸಿರುವರು. ವಿಮಾನಗಳಲ್ಲಿ ಸಿಗರೇಟು ಸೇದಕೂಡದೆಂಬ ೧೯೨೩ನೇ ಇಸವಿಯ ನ್ಯಾವಿಗೇಷನ್ ಆರ್ಡರನ್ನು ಅನುಸರಿಸಿ ಹೀಗೆ ಮಾಡಿರುವರು.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಜವಹರಲಾಲರು ಲಕ್ನೋ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಕೊಡಲಿರುವ ಭಾಷಣವನ್ನು ತಯಾರ್ಮಾಡಿರುವರೆಂದು ತಿಳಿಯಬಂದಿದೆ.

ಶ್ರೀ ಸುಭಾಷ್‌ಚಂದ್ರ ಬೋಸರನ್ನು ಬೊಂಬಾಯಿಯಲ್ಲಿ ಈ ತಾ || 8 ನೇ ಬುಧವಾರ ಬೆಳಿಗ್ಗೆ ಅವ್ಹೋಲೋ ಒಂದರಿನಲ್ಲಿ ವಿಶೇಷ ಕಾನೂನಿನ 3 ನೇ ರೆಗ್ಯುಲೇಷನ್ ಪ್ರಕಾರ ದಸ್ತಗಿರಿ ಮಾಡಿದರು.

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ವಾರಮಾರ್ಫಿಕದೃಷ್ಟಿಯಿಂದ ನೋಡಿದರೂ ವ್ಯಸ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತನ್ನ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ --ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ ವಸ್ತುವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಕರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಶಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಒಂದಿರತ್ತವೆ. ಯಾವ ಮೆಕಾನಿಕಲ್ ವಿದ್ಯುದ್ಧವಿಲ್ಲದೆ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾಗಿದೆ. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೇಶಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ.
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿ ಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ದರ್ಜೆಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಬಲತುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದ. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು. ಹೊಟ್ಟೆನೋವು, ಅಕ್ರಮಸೂತಕವನ್ನೂ. ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸಹಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನ ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮಾಡುಗೆ ಶಕ್ತಿಯನ್ನು ಕೊಡುವುದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು.

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅಮೃತಪ್ರಾಯವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟ. ಖ. ಬೇರೆ. ಚಿಕ್ಕ ಡಬ್ಬ 4 ಆಣೆ

ವಿಳಾಸ,— ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 15—4—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಏಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರ್‌ಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಚಾಹೀರಾತುಗಾರರು ಬೇಗನೆ ತಮ್ಮ ತಮ್ಮ ಚಾಹೀರಾತುಗಳನ್ನು ಅಡ್ವಾನ್ಸ್ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊತ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣವಿಡಲು ಸಮರ್ಥರಾದ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪನ್ನಿಟ್ಟು ವಿಶೇಷ ವಿವರಗಳಿಗಾಗಿ ಒರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya
Dacca (Bengal)

ಸಾಧನ ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮಾ॥ ಜೋಗೀಷಚಂದ್ರ ಘೋಸು ಎಂ. ಎ. ಎಫ್. ಸಿ ಎಸ್. ಲಂಡನ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ನಿವರವನ್ನು ತಿಳಿಸಿದರೆ ಛಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸರ್ವಣ್ ಮಿಶ್ರವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಕ್ಕೆ ೪ ರೂಪಾಯಿ.

ಸರೀಬಾದಿಸವ್ಸ್—ಪ್ರಮೇಹ, ಸರ್ವವಿಧ ರೋಗಗಳಿಗೆ ಅತ್ಯೋಷ್ಠ ಔಷಧವಾದ ರಸ, ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆಕನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮತ್ತು ೫೦ ಹೊತ್ತಿಗೆ ೫ ರೂ.

H. S- KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy

Geueral Hospital Road

MYSORE

fOr

Best Unani Medicines

ಗಮನಿಸಿರಿ ! ತಪ್ಪದೇ ಓದಿರಿ !!

ಈ ಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟವಾಗು
ತ್ತಿರುವ ಜೀವಶಾಸ್ತ್ರದ ವಿಚಾರವಾದ
ಲೇಖನಗಳೆಲ್ಲವೂ ಪುಸ್ತಕರೂಪದಲ್ಲಿ
ಅಚ್ಚಾಗುತ್ತವೆ.

" ಜೀವಶಾಸ್ತ್ರ ತತ್ವಸಾರ "

ಅಥವಾ

ಸತ್ಯವೆಲ್ಲಿ ?

ಲೇಖಕರು— ಕೆ' ಯವರು.

ಈ ಗಂಥದ ಮೊದಲನೆಯ ಮುದ್ರಣಕ್ಕೆ ಮಿತ
ಮಿತವಾದ ಸಂಖ್ಯೆಯ ಪ್ರತಿಗಳನ್ನು ಮಾತ್ರ ಅಚ್ಚು
ಹಾಕುವ ಏರ್ಪಾಡುಮಾಡಿವೆ. ಬೇಕಾದವರು ಮೊ
ದಲೇ ತಮ್ಮ ಹೆಸರನ್ನು ಎಡಿಟರವರಲ್ಲಿ ರಿಜಿಸ್ಟರ್
ಮಾಡಿಸಬೇಕು. ಅಂಥವರಿಗೆ ಗ್ರಂಥವು ಅಚ್ಚಾಗುತ್ತಲೆ
ವಿ. ಪಿ. ಮೂಲಕ ಕಳುಹಿಸಲಾಗುತ್ತದೆ. ಬೆಲೆ ರೂ. ೨

ಸೊಂದವರೇ ! ಮರುಗುತ್ತಿರುವವರೇ !!
ಇಲ್ಲಿ ಗಮನಿಸಿರಿ !!!

ಮರಣಹೊಂದಿದ ನಿಮ್ಮ ಪ್ರಿಯಬಂಧುಗಳು
ಎಲ್ಲಿರುವರು ? ಅವರೊಡನೆ ಸಂಭಾಷಿಸಬಹುದೆ ? ಈ
ಅವೋಘವಾದ ವಿಚಾರವನ್ನು ಮೇಲ್ಕಂಡ ಪುಸ್ತಕ
ವನ್ನು ಕರಿಸಿಕೊಂಡು ಓದಿ ತಿಳಿಯಿರಿ. ಈ ವಿಶೇಷ
ವಾದ ದುಃಖಶಮನವನ್ನು ಹೊಂದದೇ ಇರಬೇಡಿ
ಕೂಡಲೇ ಎಡಿಟರವರಲ್ಲಿ ನಿಮ್ಮ ಹೆಸರು ವಿಳಾಸ
ಗಳನ್ನು ತಿಳಿಸಿ ರಿಜಿಸ್ಟರ್ ಮಾಡಿಸಿರಿ.

" **ಸತ್ಯವಾದಿ ಆಫೀಸು** "
ಚಾಮರಾಜಪುರಂ, ಮೈಸೂರು.

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು
ವೃಥಾ ಚಿಂತಿಸಬೇಡಿ. ಮುಂದೆ ಬರುವುದನ್ನು
ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ.
ನಿಮ್ಮ ಜಾತಕದ ನಕಲನ್ನೋ; ಹುಟ್ಟಿದ ಕಾಲವನ್ನೋ
ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿ
ಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ.
ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು.
ಫಾರ್ಜುನ್ ಬ್ಬರಿಗೆ ೧—೪—೦ ರೂವಾಯಿ ಮಾತ್ರ

ತಾಜಕ ಜ್ಯೋತಿಷ್ಕರು,
೧೦೬೮ ಚಾಮರಾಜ ಅಗ್ರಹಾರ, ಮೈಸೂರು

ನೀರಿನಿಂದ!
ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ.

H. SASSEN & CO.,
15 Armenian Street, Post Box 163
G. T. MADRAS

Wanted

Agents with Pay and Allowances
to canvass subscribers and advertisers for

Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

shanmukhavilas
Coffee Club

Jaganmohan Palace Road
M Y S O R E

— for —

EXCELLENT TIFFIN, & COFFEE

Shiromani NARAYANACHARYA
Chowkambha, Benarese.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯ ರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷಿಯೇ ದೊರೆಯುವುದು.

ಸಣ್ಣ ಆಡ್ಕೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ; 100 ರುದ್ರಾಕ್ಷಿಗಳುಳ್ಳಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರಿಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿಪರಕ್ಕೆ ಕಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ] 1 ಆಣೆ ಸ್ಟಾಂಪು ಕಳುಹಿಸಿದಲೆ 3 ಇನಾಮುಗಳು : 1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿಸೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ.

ಉತ್ತಮ ವಚನಗಳು

" ಸಹನೆಹಿಡಿಯದೆ ವಜ್ರದ ಕಾಂತಿಯು ಹೊರಪಡುವದಿಲ್ಲ. ಕಡಿಯದೆ ಮಜ್ಜಿಗೆಯಿಂದ ಬೆಣ್ಣೆಯು ಬರುವದಿಲ್ಲ ಹಾಗೆಯೇ ಸಂಘದ್ದಾಗಲಿ, ಸರ್ಕಾರದ್ದಾಗಲಿ ಕೆಲಸಗಳನ್ನು ನಿರ್ಮೆಮಾಡದೆ ಅವುಗಳಲ್ಲಿಯ ಅನುಕೂಲ ಪ್ರತಿಕೂಲಗಳನ್ನು ತಿಳಿಯಲಾಗುವದಿಲ್ಲ. ನಿಜವಾದ ನಿರ್ಮೆಯೇ ಅಭಿವೃದ್ಧಿಗೆ ಸಾಧಕವು "
ಡಾ|| ಹೆಚ್. ಸೈಮ್ಸ್.

" ಲಂಚಗಳಿಂದ ಪ್ರಯೋಜನಗಳು ಎರಡು—(೧) ನ್ಯಾಯವಾಗಿ ಮಾಡಬೇಕಾಗಿರುವ ಕೆಲಸವನ್ನೇ ಸಕಾಲದಲ್ಲಿ ಸೌಕರ್ಯವಾಗಿ ಮಾಡಿಸಿಕೊಳ್ಳುವದು. (೨) ನ್ಯಾಯವಾಗಿ ಮಾಡಕೂಡದ ಕೆಲಸವನ್ನು ರಹಸ್ಯವಾಗಿ ಸ್ವಲಾಭನಿಮಿತ್ತವಾಗಿ ಮಾಡಿಸಿಕೊಳ್ಳುವದು. ಈ ಎರಡೂ ದೂಷ್ಯಗಳೇ. ಆಧ್ಯಾತ್ಮಿಕವಾಗಿಯೂ, ಲೌಕಿಕವಾಗಿಯೂ ಎರಡೂ ಶಿಕ್ಷಾರ್ಹಗಳು "
ಗೊ|| ಸೀತಾರಾಮಶಾಸ್ತ್ರಿ.

" ಅತಿ ಕೆಟ್ಟವನಿಗಿಂತ ಅತಿ ಒಳ್ಳೆಯವನು ಮಹಾ ಉಪದ್ರವಕಾರನು—ತಾಳಿಗಿಡದಷ್ಟು ಉದ್ದವಾಗಿರುವ ರಾಕ್ಷಸನಾಗಲಿ, ಅಂಗುಷ್ಠಪ್ರಮಾಣನಾದ ಕುಳ್ಳನಾಗಲಿ ಇರಬೇಕೆಂದು ನಾವು ಹೇಗೆ ಬಯಸುವದಿಲ್ಲವೋ ಹಾಗೆಯೇ ಅತಿ ಒಳ್ಳೆಯವನಾಗಲಿ ಅತಿ ಕೆಡಕನಾಗಲಿ ಬಯಸಕೂಡದು "
ಶ್ರೀ ಜಾರ್ಜ್ ಬರ್ನಾರ್ಡ್ ಷಾ.

" ಯಾವ ಸೃಷ್ಟಿಯಲ್ಲಿಯಾದರೂ ವಿತಂತುವಿಗೆ ಪುನರ್ವಿವಾಹವನ್ನು ಮಾಡಕೂಡಬೆಂಬ ವಚನವನ್ನು ತೋರಿಸುವದ—ನವರಿಗಾಗಲಿ, ನನಗಾಗಲಿ, ಇತರ ವಸ್ತುಗಳನ್ನು ಸೃಷ್ಟಿಸಿದ ಬ್ರಹ್ಮನಿಗಾಗಲಿ ಸಾಧ್ಯವಲ್ಲ "
ಶ್ರೀ. ಬಿ. ಮಲ್ಲಯ್ಯ.

" ಭಾರತಕಲೆಯು ಭಾರತ ಜೀವನದಂತೆ ಧರ್ಮಬದ್ಧವಾದದ್ದು—ಪ್ರಪಂಚದೃಷ್ಟಿಯಲ್ಲಿ ವಿಕಾಶವಾಗಿ ಕಾಣಬರುವದು, ಧರ್ಮದೃಷ್ಟಿಯಲ್ಲಿ ನೋಡಲ್ಪಟ್ಟಾಗ ಮಹತ್ತರ ಕಲಿಯಾಗುವದು. "
ಶ್ರೀ. ಎಸ್. ಸಿ. ನೋಥಾ.

" ನಾರಿಯು ನರನಿಗೆ ಆಟದ ವಸ್ತುವಾಗಿ ಹೋಗಿದೆ. ಸ್ವಾತಂತ್ರ್ಯಪಥದಿಂದ ಸ್ತ್ರೀಯು ಯಾವಾಗ ಬಿದ್ದುಹೋದಳೋ ಆಗಲೇ ದೇಶವೂ ಕೂಡ ಅಧಃಪತಿತವಾಗಿ ಹೋಯಿತು "
ಶ್ರೀ. ಬಿ. ಕಾಮೇಶ್ವರಮ್ಮ.

" ಗುರುವಿಗಾಗಿ ಹುಡುಕುವದೆಂದರೆ ಬೆಟ್ಟವನ್ನು ಹತ್ತುವಂತಹ ಕಠಿಣ ಕಾರ್ಯವು. ಕಷ್ಟಪಟ್ಟು ಹುಡುಕಿ ಉತ್ತಮನಾದ ಗುರುವನ್ನು ಹೊಂದಿದಾಗಲೇ ಆ ಹೊಂದುವಿಕೆಗೆ ನಾವು ಆನಂದಪಡಬಲ್ಲೆವು "
ಶ್ರೀ ಫ್ರಾನ್ಸಿಸ್ ಈಟ್ಸ್‌ಬ್ರೌನು.